ತಯಾರಿಗೆ ಸಹಕರಿಸುತ್ತಿದ್ದಳು. 'ಯೂ ಶುಡ್ ಬಿ ಪ್ರೌಡ್ ಆಫ್ ಯುವರ್ ಸನ್ ಫಾರ್ ಗೆಟಿಂಗ್ ದಿಸ್ ಆಪರ್ಚುನಿಟಿ' ಎಂದು ನಮಗೆ ಹೇಳುತ್ತಿದ್ದಳು.

ಆದಿತ್ಯ ಯು.ಎಸ್.ಗೆ ಹೋಗಿ ಹನ್ನೆರಡು ವರ್ಷಗಳಾದವು. ಈ ಅವಧಿಯಲ್ಲಿ ಆತ ಕೇವಲ ಮೂರು ಬಾರಿ ಇಂಡಿಯಾಕ್ಕೆ ಬಂದಿದ್ದಾನೆ. ಮೊದಲ ಸಲ ಎರಡು ವರ್ಷಗಳ ಬಳಿಕ. ಒಂದು ತಿಂಗಳ ರಜೆ ಪಡೆದು ಬಂದಿದ್ದ. ಆದರೆ ಅಷ್ಟೂ ಸಮಯ ಯಾವುದೋ ಪ್ರಾಜೆಕ್ಟ್‌ನಲ್ಲಿ ಬಿಸಿಯಾಗಿದ್ದ. ಅವನ ಮದುವೆಗಾಗಿ ನಾವು ಮ್ಯಾಟ್ರಿಮೊನಿ ಕಾಲಂನಲ್ಲಿ ಪ್ರಕಟಣೆ ನೀಡಿದ್ದೆವು. ಆತ ಮದುವೆ ಮಾಡಿಕೊಂಡು ಹೋದರೆ ನಮಗೆ



ಶಾಂತಿ ಸಿಗುವುದೆಂದು ನಾವು ಭಾವಿಸಿದ್ದೆವು. ಆದರೆ ಬಂದಿದ್ದ ಯಾವ ಪ್ರಸ್ತಾಪಗಳಿಗೂ ಅವನು ರೆಸ್ಪಾನ್ಸ್ ನೀಡಲಿಲ್ಲ. ಅವನು ಹೊರಡುವ ಸಮಯ ಬಂದೇ ಬಿಟ್ಟಿತ್ತು. ಆಗ ನಾನೇ 'ನೋಡಪ್ಪ, ಅಲ್ಲಿ ಯಾವುದೇ ಹುಡುಗಿಯ ಸಹವಾಸಕ್ಕೆ ಬೀಳಬೇಡ. ಮದುವೆ, ಸಂಬಂಧಗಳಿಗೆ ನಮ್ಮ ದೇಶದಲ್ಲಿ ಇರುವ ಪಾವಿತ್ರ್ಯ ವಿದೇಶಗಳಲ್ಲಿ ಇಲ್ಲ. ಸಣ್ಣ ಸಣ್ಣ ವಿಷಯಗಳಿಗೂ ಅಲ್ಲಿ ಡೈವೋರ್ಸ್, ಮರುಮದುವೆ ಸರ್ವೇಸಾಮಾನ್ಯ...' ಎಂದೆಲ್ಲ ಉಪದೇಶ ಮಾಡಿದ್ದೆ.

ಒಂದು ವರ್ಷ ಕಳೆಯುವುದರೊಳಗೆ ಆದಿತ್ಯ ಯಾವುದೋ ಒಂದು ಅಮೆರಿಕನ್ ಹುಡುಗಿಯ ಜೊತೆ ಮದುವೆಯಾಗಿರುವ ವಿಷಯವನ್ನು ಫೋನ್‌ನಲ್ಲಿ ಅಮ್ಮ ಹಾಗೂ ತಂಗಿಗೆ ತಿಳಿಸಿ, ಆಕೆಯ ಪರಿಚಯವನ್ನೂ ಮಾಡಿದ್ದ. ನನಗೆ ಈ ವಿಷಯ ತಿಳಿದಾಗ ನಾನು '... ಆಯ್ತು ಮುಂದಿನ ವರ್ಷ ಡೈವೋರ್ಸ್ ಫೋನು ಬಂದರೂ ಬರಬಹುದು...' ಎಂದಷ್ಟೇ ಹೇಳಿದ್ದೆ.

ಮತ್ತೊಂದೆರಡು ವರ್ಷಗಳು ಸಂದವು. ಹೀಗೆ ಮಾತಾಡುತ್ತ ಪತ್ನಿ ಹೇಳಿದಳು '... ಆದಿತ್ಯ ಮತ್ತು ಮರಿಯಾಳ ಪ್ರೀತಿಯ ಬದುಕನ್ನು ನೀವು ಅರ್ಥಮಾಡಿಕೊಳ್ಳಲೇ ಇಲ್ಲ. ಎಷ್ಟು ದಿನ ಹೀಗೆ ಮಗನನ್ನು ಮರೆತು ರಕ್ತ ಸಂಬಂಧವನ್ನು ಕಡಿದುಕೊಳ್ಳಬಯಸುತ್ತೀರಿ?'

ನನ್ನ ಅಮ್ಮ ಕೂಡ, 'ಯಾರದ್ದೇ ಏನೇ ಆದ್ರೂ ಕರುಳಬಳ್ಳಿ ಸಂಬಂಧ ಕಡಿದುಕೊಳ್ಳಬಾರ್ದು. ಮದುವೆ ಅನ್ನೋದನ್ನ ದೇವ್ರೇ ನಿಶ್ಚಯ ಮಾಡಿ ಕಳಿಸಿರ್ತಾನೆ...' ಅಂತ ಹೇಳ್ತಾ ಇದ್ಲು... ಆದ್ರೆ ಆದಿತ್ಯ ತಪ್ಪು ಮಾಡಿದ್ದಾನೆ ಅಂತ ನನ್ನ ಮನಸ್ಸು ಹೇಳ್ತಾ ಇತ್ತು.

ಆದಿತ್ಯ ತಾನು ಹೆಣ್ಣು ಮಗುವಿನ ತಂದೆ ಆಗಿದ್ದೇನೆ ಎಂದು ಸಂದೇಶ ಕಳುಹಿಸಿದಾಗ ಇವಳ ಸಂತೋಷಕ್ಕೆ ಎಣೆಯೇ ಇಲ್ಲದಾಗಿತ್ತು. ಕಾಲುಗಳು ನೆಲದ ಮೇಲೆ ನಿಲ್ಲುತ್ತಲೇ ಇರಲಿಲ್ಲ. ಆದಷ್ಟೂ ಬೇಗ ಮಗನಲ್ಲಿಗೆ ಹೋಗಿ ತನ್ನ ಮುಂದಿನ ಕುಡಿಯನ್ನು ಮುದ್ದಾಡುತ್ತ ತಾನೇ ಮಗುವಾಗಿ ಬಿಡುವ ತವಕ ಅವಳಲ್ಲಿ ತುಂಬಿತ್ತು. ಅದೇ ಖುಷಿಯಲ್ಲಿ ಅವಳು '... ಈಗಲಾದ್ರೂ ಹೋಗಿ ಒಮ್ಮೆ ಮುಖ ನೋಡಬಾರದೇ...' ಎಂದು ಒತ್ತಾಯಿಸಿದಳು. ಆದರೆ ನನ್ನ ಹೃದಯ ಮಾತ್ರ ಕಲ್ಲಿನಂತೆ ಆಗಿಹೋಗಿತ್ತು.

***

ಮೂರು ವರ್ಷಗಳ ನಂತರ ಸುಷ್ಮಾಳ ಮದುವೆ ನಿಶ್ಚಯ ಆಯಿತು. ಮದುವೆಗೆ ಆದಿತ್ಯ ತನ್ನ ವಿದೇಶಿ ಪತ್ನಿ ಹಾಗೂ ಒಂದು ವರ್ಷದ ಮಗಳನ್ನು ಕರೆದುಕೊಂಡು ಬಂದ. ಮನೆಯಲ್ಲಿ ಖುಷಿಯೋ ಖುಷಿ. ಆದಿತ್ಯ ತನ್ನ ಪತ್ನಿ ಮರಿಯಾಳನ್ನು ಎಲ್ಲರಿಗೂ ಪರಿಚಯ ಮಾಡಿಸುತ್ತ ಭಾರತೀಯ ಸಂಪ್ರದಾಯದಂತೆಯೇ ಮದುವೆಯಾದದ್ದಾಗಿ ವಿವರಣೆ ನೀಡುತ್ತಿದ್ದ. ನನ್ನ ಕೋಪ, ಅಸಮಾಧಾನವನ್ನೂ ಲೆಕ್ಕಿಸದೇ ಧಾರಾಳವಾಗಿ ಖರ್ಚು ಮಾಡುತ್ತಿದ್ದ.

ಸುಷ್ಮಾಳ ತಾಯಿಯಂತೂ ಗೊಂಬೆಯಂಥ ತನ್ನ ಮೊಮ್ಮಗಳನ್ನು ಎತ್ತಿ ಮುದ್ದಾಡುತ್ತ ಆನಂದದಲ್ಲಿ ತೇಲುತ್ತಿದ್ದಳು. ಸಂಬಂಧಿಕರು ಆದಿತ್ಯನಿಗೆ ಅಮೆರಿಕದ ಪೌರತ್ವ ಸಿಕ್ಕಿರುವುದಕ್ಕೆ ಅಭಿನಂದನೆ ಸಲ್ಲಿಸುತ್ತಿದ್ದರು. ನಾನು ಮಾತ್ರ ತಟಸ್ಥನಾಗಿ ಎಲ್ಲವನ್ನೂ ಗಮನಿಸುತ್ತಿದ್ದೆ. ಆ ಮುಗ್ಧ ಮಗುವನ್ನು ಎತ್ತಿ ಮುದ್ದಾಡಬೇಕೆಂದು ನನಗೂ ಅನ್ನಿಸುತ್ತಿತ್ತು. ಆದರೆ ನನ್ನ ಪ್ರತಿಷ್ಠೆ, ಸೆಡವು ನನ್ನನ್ನು ಹಿಂದೆ ತಳ್ಳುತ್ತಿದ್ದವು. ಆತ ಮೊದಲೇ ನನ್ನಿಂದ ಅಂತರ ಕಾಯ್ದುಕೊಂಡಿದ್ದ.

ಆದಿತ್ಯ ಹೋಗುವಾಗ ನನ್ನ ಕಾಲಿಗೆ ನಮಸ್ಕರಿಸಿ ಹೇಳಿದ್ದ 'ಪಪ್ಪ... ಪ್ಲೀಸ್, ಮಮ್ಮಿ ಜೊತೆ ಒಮ್ಮೆ ಯು.ಎಸ್.ಗೆ ಬನ್ನಿ. ನಾನು ಹೋದ ಕೂಡಲೇ ನಿಮಗೆ ಸಂಬಂಧಿಸಿದ ಎಲ್ಲಾ ಪೇಪರ್ಸ್ ರೆಡಿ ಮಾಡಿ ಟಿಕೆಟ್ ಜೊತೆ ಕಳುಹಿಸುತ್ತೇನೆ. ನನ್ನ ಕಲೀಗ್ಸ್‌ನ ಎಲ್ಲಾ ಪೇರೆಂಟ್ಸ್ ಪ್ರತೀವರ್ಷ ಬರ್ತಾ ಇರ್ತಾರೆ. ಪ್ಲೀಸ್...!'

ಆಗಲೂ ನಾನು ಇಗ್ನೋರ್ ಮಾಡಿಬಿಟ್ಟೆ.

ನಾನು ಏಕೆ ಇಷ್ಟು ನಿರ್ಮೋಹಿ ಆಗಿಬಿಟ್ಟೆ? ನನ್ನ ತೋಳಿನಲ್ಲಿ ಆಡಿ ಬೆಳೆದ ನನ್ನ ಆದಿತ್ಯನಲ್ಲವೆ ಅವನು? ಬೆಳೆಯುತ್ತಾ ಹೋದ ಹಾಗೆ ತನ್ನ ಸ್ವಂತ ಶಕ್ತಿಯಿಂದ ಮೇಲೇರಿ ಹೋದ ಆತ. ಅದಕ್ಕೆಂದೇ ನನಗೆ ಇಷ್ಟೊಂದು ಕೋಪ, ಸಿಡುಕು? ಅಥವಾ ಆದಿತ್ಯ ಇಲ್ಲಿ ಇಲ್ಲದೇ ಹೋದರೆ ನನಗೆ ಕೊನೆಗಾಲದಲ್ಲಿ ಆಸರೆ ಇಲ್ಲದಾಗುವ ಭಯವೇ? ಅದಕ್ಕಾಗಿ ನಾನು ಇಷ್ಟೊಂದು ನಿಷ್ಠುರನಾಗಿದ್ದೇನೆಯೇ?

ಯು.ಎಸ್. ತಲುಪಿದ ಮೇಲೆ ಆತ ನಮಗಾಗಿ ಎಲ್ಲ ವ್ಯವಸ್ಥೆ ಮಾಡಿ ಟಿಕೆಟ್ ಕಳುಹಿಸಿದ್ದ. ಆದಿತ್ಯನ ತಾಯಿ ತುಂಬಾ ಖುಷಿಯಾಗಿದ್ದಳು. ಮಗ ಮತ್ತು ಅವನ ಸಂಸಾರವನ್ನು ಕಂಡು ಕೋಪವೆಲ್ಲ ಕರಗಿ ಹೋಗಿ ನಾನು ಅವಳ ಜೊತೆ ಯು.ಎಸ್.ಗೆ ಹೋಗಲು ಸಿದ್ಧನಾಗುವೆನೆಂದು ಆಕೆ ಭಾವಿಸಿದ್ದಳು. ಆದರೆ ನಾನು ಮಾತ್ರ ನನ್ನ ಹಟ ಬಿಡಲಿಲ್ಲ. ನನ್ನೆದುರು ಆಕೆ ಸೋಲಲೇ ಬೇಕಾಯಿತು.

'ಹಾಂ, ಹೋಗುವುದಿದ್ದರೆ ನೀನು ಒಬ್ಬಳೇ ಹೋಗಿ ಬಾ, ಅದಕ್ಕೇನಂತೆ...' ಎಂದು ಸುಷ್ಮಾ ಒತ್ತಾಯಿಸಿದಳು. ಆದರೆ ಆಕೆ ಒಪ್ಪಲಿಲ್ಲ. ಪ್ರೋಗ್ರಾಂ ಕ್ಯಾನ್ಸಲ್ ಆಯಿತು. ಅವಳು ಒಳಗೊಳಗೇ ಮರುಗುತ್ತ ಮಗನ ನೆನಪಲ್ಲೇ ಡಿಪ್ರೆಶನ್‌ಗೆ ತೆರಳುತ್ತಿದ್ದದ್ದು ನನಗೆ ಅರ್ಥವಾಗಲೇ ಇಲ್ಲ. ಒಂದು ದಿನ ಆದಿತ್ಯನ ಹೆಸರು ಹೇಳುತ್ತಲೇ ಆಕೆ ನನ್ನನ್ನು ಬಿಟ್ಟು ಇಹಲೋಕ ತ್ಯಜಿಸಿದಳು. ಆಗ ನಾನೆಷ್ಟು ಸ್ವಾರ್ಥಿ ಎಂದು ನನಗೆ ಅನಿಸದೇ ಇರಲಿಲ್ಲ.

ಸುಷ್ಮಾ ಡಾಕ್ಟರ್ ಜೊತೆ ರೂಮ್‌ಗೆ ಬಂದಾಗ ನನ್ನ ಯೋಚನೆಯ ಸರಣಿ ತುಂಡಾಯಿತು. ಡಾಕ್ಟರ್ ಚೆಕ್‌ಅಪ್ ಮಾಡಿ ಆದ ಮೇಲೆ ಹೇಳಿದರು – 'ನೀವು ಈಗ ಸುಧಾರಿಸಿದ್ದೀರಿ. ಮನೆಗೆ ಹೋಗುವ ತವಕದಲ್ಲಿದ್ದೀರಿ ಅಲ್ಲವೇ...? ಸರಿ, ನಾಳೆ ನಿಮ್ಮನ್ನು ಡಿಸ್ಚಾರ್ಜ್ ಮಾಡುವ ಬಗ್ಗೆ ತೀರ್ಮಾನಿಸುತ್ತೇನೆ.'

ಕಣ್ಣಿನ ಅಂಚಿನಿಂದ ಕಿವಿಯ ತನಕ ಹರಿದ ಕಣ್ಣೀರಿನ ತೆಳುಗೆರೆಯನ್ನು ಸುಷ್ಮಾ ಗಮನಿಸಿದ್ದಳು.

'ಪಪ್ಪ ಪ್ಲೀಸ್, ನಾಳೆಯ ಹೊತ್ತಿಗೆ ನೀವು ಚೆನ್ನಾಗಿರುತ್ತೀರಿ. ಯೋಚಿಸಬೇಡಿ...'

ಅವಳಿಗೆ ಆಶೀರ್ವಾದ ಮಾಡಲು ಕೈಎತ್ತುವ ಪ್ರಯತ್ನದಲ್ಲಿದ್ದಾಗ ಅವಳು ನನ್ನ ಕೈಯನ್ನು ಹಿಡಿದುಕೊಂಡು ಚುಂಬಿಸಿದಳು. ಪಾಪ...! ಎಷ್ಟು ಮುಗ್ಧೆ ನನ್ನ ಮಗಳು! ಬಹುಶಃ ಇವಳ ಈ ಪ್ರೀತಿ, ವಾತ್ಸಲ್ಯದ ಸ್ವಭಾವದಿಂದಾಗಿ ಅಳಿಯ ಕೂಡ ಮೃದುವಾಗಿಬಿಟ್ಟಿದ್ದಾರೆ. ಅವರೂ ಸಹ ನನ್ನ ಸೇವೆ ಮಾಡುವುದರಲ್ಲಿ ಹಿಂದೆ ಬಿದ್ದಿಲ್ಲ. ದೇವರ ದಯೆಯಿಂದ ಮಗಳ ಸಂಸಾರ ಚೆನ್ನಾಗಿ ನಡೆತಿದೆ.

ನಾನು ಮೆಲುದನಿಯಲ್ಲಿ ಹೇಳಿದೆ... 'ಮಗಳೇ... ನೀನು ಮನಗೆ ಹೋಗು. ಮಕ್ಕಳು ಕಾಯುತ್ತಿರುತ್ತಾರೆ. ರೋಹಿತ್‌ನಂತೂ ದಿನಾ ಆಸ್ಪತ್ರೆಯಲ್ಲಿಯೇ ಮಲಗಲು ಬರುತ್ತಾರೆ.